# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5050/2024 ಫ್ರಾಸಾ-19
ಚಾಸಾ-23

ದಿನಾಂಕಃ 29-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಹನುಮಂತರಾಯ |
| **ತಂದೆಯ / ಗಂಡನ ಹೆಸರು** | ಲಕ್ಕಪ್ಪ ತವಾರ್ |
| **ವಯಸ್ಸು** | 31 |
| **ಉದ್ಯೋಗ** | ಪಿಪಿ 340 ವೈ.ಎನ್. ಹೊಸಕೋಟೆ ಪೊಲೀಸ್ ಠಾಣೆ |
| **ವಾಸಸ್ಥಳ** | ವೈ.ಎನ್. ಹೊಸಕೋಟೆ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಾನು ದಿ.04.09.2021 ರಿಂದ ಇಲ್ಲಿಯವರೆಗೂ ವೈ.ಎನ್. ಹೊಸಕೋಟೆ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 13.08.2021 ರಂದು ಚಾಸಾ-31 ರವರು ನನ್ನನ್ನು ಮತ್ತು ಚಾಸಾ-22 ರವರನ್ನು ಆರೋಪಿ ಪತ್ತೆಗಾಗಿ ನೇಮಕ ಮಾಡಿದ್ದು ಅದರಂತೆ ದಿ.14.08.2021 ರಂದು ಬೆಳಿಗ್ಗೆ 7-00 ಗಂಟೆಗೆ ಸೂಳನಾಯಕನಹಳ್ಳಿ , ನೀಲಂಹಳ್ಳಿ , ಬುಡ್ಡಾರೆಡ್ಡಿ ಹಳ್ಳಿ ಗೆ ಹೋಗಿ ಮಾಹಿತಿ ಸಂಗ್ರಹಿಸಿದ್ದು ಆರೋಪಿ ಕ್ಯಾತಗಾನಕೆರೆಯ ಸಂಬಂಧಿಕರ ಮನೆಗೆ ಹೋಗಿರಬಹುದು ಎಂದು ತಿಳಿದು ಬಂದಿದ್ದರಿಂದ ನಾವು ಕ್ಯಾತಗಾನಕೆರೆ ಗ್ರಾಮಕ್ಕೆ ಹೋಗಿ ಅಲ್ಲಿ ಅರಳಿಕಟ್ಟೆ ಹತ್ತಿರ 9-00 ಗಂಟೆಗೆ ಅಲ್ಲಿ ಇದ್ದ ರಮೇಶನನ್ನು ನಾವು ವಶಕ್ಕೆ ತೆಗೆದುಕೊಂಡು ಸಿ.ಪಿ.ಐ ಕಚೇರಿಗೆ ಬಂದು ಬೆಳಿಗ್ಗೆ 10-20 ಕ್ಕೆ ಚಾಸಾ-1 ರವರ ಮುಂದೆ ಹಾಜರುಪಡಿಸಿ ವರದಿ ಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ವರದಿಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ವರದಿಯನ್ನು ನಿಪಿ-27 ಎಂದು, ಸಾಕ್ಷಿ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.

ಅದೇ ದಿನ ಮದಾಹ್ನ 2-00 ರಿಂದ 2-50 ಗಂಟೆಯವರೆಗೆ ಚಾಸಾ-31 ರವರ ಕಚೇರಿಯಲ್ಲಿ ಆರೋಪಿ ತಾನು ಕೃತ್ಯ ವೆಸೆಗಿದ ಸಮಯದಲ್ಲಿ ಹಾಕಿದ್ದ ಬಟ್ಟೆಯನ್ನು ಬಿಚ್ಚಿ ಹಾಜರುಪಡಿಸಿದ. ಸದರಿ ಬಟ್ಟೆಗಳು ಒಂದು ಶರ್ಟ್, ಒಂದು ಬರ್ಮಡಾ, ಟವಲ್ ಹಾಜರುಪಡಿಸಿದ್ದು ಅದನ್ನು ಚಾಸಾ-31 ರವರು ನಿಪಿ-13 ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಿಪಿ-13 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ . ನ್ಯಾಯಾಲಯದ ಮುಂದೆ ಇರುವ ಮು.ಮಾ-6 ರಿಂದ 8 ನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆ ಕಾಲಕ್ಕೆ ನಿಪಿ-14 ಮತ್ತು 15 ರಂತೆಸೂಳನಾಯಕನಹಳ್ಳಿ , ನೀಲಂಹಳ್ಳಿ , ಬುಡ್ಡಾರೆಡ್ಡಿ ಹಳ್ಳಿ ಗೆ ಹೋಗಿ ಫೋಟೋ ತೆಗೆದಿರುತ್ತಾರೆ, ನಿಪಿ-14 ಮತ್ತು 15 ಫೋಟೋಗಳನ್ನು ನೋಡಿದ್ದು ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ. ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯ ಬೆಂಗಾವಲು ಕರ್ತವ್ಯವನ್ನು ಮಾಡಿರುತ್ತೇನೆ.

**<u>ಪಾಟೀಸವಾಲು ಶ್ರೀ. ಪಿ.ಆರ್.ಪಿ. ವಕೀಲರಿಂದ ಆರೋಪಿ ಪರವಾಗಿ:-</u>**

ಆರೋಪಿ ಪತ್ತೆಗೆ ಲಿಖಿತವಾಗಿ ಆದೇಶ ಕೊಟ್ಟಿರುವುದಿಲ್ಲ. ನಾನು ತನಿಹಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ನಾನು ನನ್ನ ಹೇಳಿಕೆಯಲ್ಲಿ ಸೂಳನಾಯಕನಹಳ್ಳಿ , ನೀಲಂಹಳ್ಳಿ , ಬುಡ್ಡಾರೆಡ್ಡಿ ಹಳ್ಳಿ ಗೆ ಹೋಗಿ ಮಾಹಿತಿ ಸಂಗ್ರಹಿಸಿರುತ್ತೇನೆಂದು ಹೇಳಿರುತ್ತೇನೆ. ನಾವು ಆರೋಪಿ ಪತ್ತೆಗೆ ಮಫ್ತಿಯಲ್ಲಿ ಹೋಗಿದ್ದೇವು. ಆರೋಪಿ ನಮ್ಮನ್ನು ನೋಡಿ ಓಡಿ ಹೋಗಿರುವುದಿಲ್ಲ. ಆರೋಪಿತನನ್ನು ನಾನು ಮೊದಲು ನೋಡಿದ್ದೆ. ಆರೋಪಿಯನ್ನು ಅವರ ಮನೆಯಿಂದ ವಶಕ್ಕೆ ಪಡೆದುಕೊಂಡು ತಂದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಆ ದಿನ ಫುಲ್ ಶರ್ಟ್ ಹಾಕಿಕೊಂಡಿದ್ದ. ಬರ್ಮಡಾ ಪಾಚಿ ಕಲರ್ ಇತ್ತು, ಟವಲ್ ಕಂದು ಮತ್ತು ಅರಿಶಿನ ಕಲರ್ ಇತ್ತು. ಆರೋಪಿ ಯಾವುದೇ ಬಟ್ಟೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಶರ್ಟ್‌ನ ಮುಂಭಾಗದಲ್ಲಿ ರಕ್ತದ ಕಲೆಗಳು ಇದ್ದವು.

ಶರ್ಟ್ ಗೆ ರಕ್ತದ ಕಲೆ ಇತ್ತು ಎಂದು ಪಂಚನಾಮೆಯಲ್ಲಿ ಬರೆದಿರುತ್ತದೆ. ಪಂಚನಾಮೆಯನ್ನು ಠಾಣಾ ಸಿಬ್ಬಂದಿ ಶ್ರೀನಿವಾಸ್ ಎನ್ನುವವರು ಬೆರಳಚ್ಚು ಮಾಡಿರುತ್ತಾರೆ. ಶ್ರೀನಿವಾಸ ರವರು ಪಂಚನಾಮೆಗೆ ಸಹಿ ಮಾಡಿದ ಬಗ್ಗ ನನಗೆ ಗೊತ್ತಿಲ್ಲ. ಪಂಚನಾಮೆಗೆ ಅಕ್ಕಲಪ್ಪ ಮತ್ತು ನಾಗಭೂಷಣ ಎನ್ನುವವರು ಪಂಚರಾಗಿದ್ದರು. ನನ್ನ ಸಮಕ್ಷಮ ನಿಪಿ-13 ರಂತೆ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿ ಮಾತು ಕೇಳಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**